# ಬನ್ನಂಜೆಯವರ ಬದುಕು-ಬರವಣಿಗೆ

**ಅಕ್ಷತಾ***

**DOI: https://doi.org/10.5281/zenodo.19638093**

**ABSTRACT**

ಬನ್ನಂಜೆ ಗೋವಿಂದಾಚಾರ್ಯರು ಭಾರತೀಯ ಸಂಸ್ಕೃತಿ, ವೇದಾಂತದ ಪ್ರಖರ ಚಿಂತಕರು, ಅಪ್ರತಿಮ ವಾಗ್ಮಿಗಳು ಹಾಗೂ ಶ್ರೇಷ್ಠ ಸಂಸ್ಕೃತ-ಕನ್ನಡ ವಿದ್ವಾಂಸರು. ಬಾಲ್ಯದಿಂದಲೇ ಅಸಾಧಾರಣ ಸ್ಮರಣಶಕ್ತಿ ಮತ್ತು ಜ್ಞಾನದಾಹ ಹೊಂದಿದ್ದ ಇವರು, ಬಹುಪಾಲು ಸ್ವಾಧ್ಯಾಯದ (ಸ್ವಯಂ-ಅಧ್ಯಯನ) ಮೂಲಕವೇ ಅಗಾಧ ಪಾಂಡಿತ್ಯವನ್ನು ಒಲಿಸಿಕೊಂಡರು. ಕೇವಲ ಶಾಸ್ತ್ರಾಧ್ಯಯನಕ್ಕೆ ಸೀಮಿತವಾಗದೆ, ಕನ್ನಡದಲ್ಲಿ ಸುಮಾರು ೯೪ ಮತ್ತು ಸಂಸ್ಕೃತದಲ್ಲಿ ೩೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸುವ ಮೂಲಕ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಕಾಳಿದಾಸ, ಶೂದ್ರಕ, ಭವಭೂತಿಯಂತಹ ಮಹಾಕವಿಗಳ ಸಂಸ್ಕೃತ ನಾಟಕಗಳನ್ನು ಕನ್ನಡಕ್ಕೆ ಅತ್ಯಂತ ಸೃಜನಶೀಲವಾಗಿ ತಂದ ಕೀರ್ತಿ ಇವರದು. 'ಆವೆಯ ಮಣ್ಣಿನ ಆಟದ ಬಂಡಿ', 'ನೆನಪಾದಳು ಶಕುಂತಲೆ' ಮುಂತಾದ ಕೃತಿಗಳು ಅನುವಾದದ ಗಡಿಯನ್ನು ದಾಟಿ ಸ್ವತಂತ್ರ ಸೃಷ್ಟಿಗಳಂತೆ ಹೊಮ್ಮಿವೆ. ಪದ್ಮಶ್ರೀ ಪುರಸ್ಕೃತರಾದ ಆಚಾರ್ಯರ ಅಪರೂಪದ ಬದುಕು, ಅಗಾಧ ವಿದ್ವತ್ತು ಮತ್ತು ಬಹುಮುಖಿ ಬರವಣಿಗೆಯ ವಿಸ್ತಾರವನ್ನು ಇಲ್ಲಿ ಸಂಕ್ಷಿಪ್ತವಾಗಿ ಕಟ್ಟಿಕೊಡಲಾಗಿದೆ.

**KEYWORDS:** ಬನ್ನಂಜೆ ಗೋವಿಂದಾಚಾರ್ಯ, ಸಂಸ್ಕೃತ ವಿದ್ವಾಂಸರು, ಸೃಜನಶೀಲ ಅನುವಾದ, ಸ್ವಾಧ್ಯಾಯ, ಸಾಂಸ್ಕೃತಿಕ ಚಿಂತಕರು.

* **ಅಕ್ಷತಾ,** ಸಂಶೋಧನಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ವಿಶ್ವ ಸಂಸ್ಕೃತಿಗೆ ಭಾರತದ ಕೊಡುಗೆ ಅಪಾರ. ಅದರಲ್ಲೂ ಕರ್ನಾಟಕ ವಿಶಿಷ್ಟವಾದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಗಳಿಸಿದೆ. ಹೀಗೆ ಸಾಂಸ್ಕೃತಿಕ ಹಿನ್ನೆಲೆಯಿರುವ ಪ್ರಸಿದ್ಧ ಸ್ಥಳವೆಂದರೆ ಅದು ಕರ್ನಾಟಕದ ಉಡುಪಿ ಜಿಲ್ಲೆ. ಈ ಭಾಗದಲ್ಲಿ ಅನೇಕ ಕವಿಗಳು, ಸಾಹಿತಿಗಳು, ವಿದ್ವಾಂಸರು, ಲೇಖಕರು, ಬರಹಗಾರರು ನೆಲೆಸಿದ್ದಾರೆ. ಇಂಥವರಲ್ಲಿ ಬನ್ನಂಜೆ ಗೋವಿಂದಾಚಾರ್ಯರು ಪ್ರಮುಖರು. ನಮ್ಮ ನಾಡಿನ ಮಹಾನ್ ಸಾಂಸ್ಕೃತಿಕ ಚಿಂತಕರು, ಉತ್ತಮ ವಾಗ್ಮಿ, ಆಧ್ಯಾತ್ಮಿಕ ಪ್ರವಚನಕಾರರೂ ಆಗಿದ್ದರು. ತಮ್ಮ ಪ್ರವಚನಗಳ ಮೂಲಕ ತತ್ವ ಪ್ರಚಾರ ಕೈಗೊಂಡಿದ್ದಾರೆ.

ಈ ಕಾಲದ ಶ್ರೇಷ್ಠ ಭಾರತೀಯ ಸಂಸ್ಕೃತ ವಿದ್ವಾಂಸರಲ್ಲಿ ಬನ್ನಂಜೆಯವರು ಒಬ್ಬರು. ಉಡುಪಿಯ ಅಂಬಲಪಾಡಿಯಲ್ಲಿ ಜನಿಸಿದರು. ವಿದ್ವತ್ ಪರಂಪರೆಯಲ್ಲಿ ಬೆಳೆದರು. ತಂದೆ ಪಡುಮುನ್ನೂರು ನಾರಾಯಣಾಚಾರ್ಯರು. ಬಹುದೊಡ್ಡ ಸಂಸ್ಕೃತ ವಿದ್ವಾಂಸರು. ಅಜ್ಜ, ಮುತ್ತಜ್ಜರು ಸಂಸ್ಕೃತ ವಿದ್ವಾಂಸರು. ಅಜ್ಜಿ ಬಹು ದೊಡ್ಡ ವಿದುಷಿ. ಸಂಸ್ಕೃತ ಬಲ್ಲವರು. ಹೀಗೆ ಬನ್ನಂಜೆಯವರಿಗೆ ವಿದ್ವತ್ತು ಸಹಜವಾಗಿಯೇ ಒಲಿದಿತ್ತು.

ಉಡುಪಿ ಜಿಲ್ಲೆಯ ಅಂಬಲಪಾಡಿಯಲ್ಲಿ ತರ್ಕಕೇಸರಿ ಪಡುಮುನ್ನೂರು ನಾರಾಯಣಾಚಾರ್ಯರು ಮತ್ತು ಸತ್ಯಭಾಮೆ ದಂಪತಿಗಳ ದ್ವಿತೀಯ ಸುಪುತ್ರರಾಗಿ 1936 ಆಗಸ್ಟ್ 3 ರಂದು ಜನಿಸಿದರು. ಅಣ್ಣ ಬನ್ನಂಜೆ ರಾಮಾಚಾರ್ಯರು. ಬನ್ನಂಜೆಯವರಿಗೆ ಬಾಲ್ಯದಿಂದಲೂ ಅಧ್ಯಯನದಲ್ಲಿ ಆಸಕ್ತಿ. ಸದಾಕಾಲ ಪುಸ್ತಕದ ಓದಿನಲ್ಲಿಯೇ ಮುಳುಗಿರುತ್ತಿದ್ದರು. ಇವರದು ಬಹುಮುಖ ಪ್ರತಿಭೆ. ನಾಲ್ಕನೆಯ ವಯಸ್ಸಿಗೆ ಸ್ಪಷ್ಟವಾಗಿ ವಿಷ್ಣುಸಹಸ್ರನಾಮವನ್ನು ಹೇಳುತ್ತಿದ್ದರು. ಎಂಟನೆಯ ವರ್ಷಕ್ಕೆ ಉಪನಯನ. ಆಗಲೇ ಶಾಲೆಗೆ ಸೇರಿದ್ದು. ಇವರನ್ನು ಪರೀಕ್ಷೆ ಮಾಡಿ ನೇರವಾಗಿ ನಾಲ್ಕನೇ ತರಗತಿಗೆ ಸೇರಿಸಿಕೊಂಡರು. ಅಲ್ಲಿಂದ ಆರನೇ ತರಗತಿಗೆ ಬಡ್ತಿ ದೊರೆಯಿತು. ಅಂತಹ ವಿಶಿಷ್ಟ ಪ್ರತಿಭೆ ಇವರದು. “ನನ್ನ ಬಾಲ್ಯದ ರೀತಿ ನೋಡಿದರೆ ನನಗೆ ಎಂ.ಎ., ಪಿಎಚ್.ಡಿ. ಮೊದಲಾದ ಪದವಿ ಪಡೆಯುವ ತಾಕತ್ತು ಇತ್ತು. ಆದರೆ ನನಗೆ ಆ ಪದವಿಯ ಕಡೆಗೆ ಆಸಕ್ತಿ ಇರಲಿಲ್ಲ. ನನ್ನನ್ನು ಯಾರಾದರೂ ಮುಂದೆ ಏನಾಗಬೇಕು ಎಂದು ಕೇಳಿದರೆ ನಿರುದ್ಯೋಗಿಯಾಗಿ ಸಾಯುವವರೆಗೆ ಕಲಿಯಬೇಕು ಎಂದು ಹೇಳುತ್ತಿದ್ದೆ.” (ಆತ್ಮನಿವೇದನೆ ಪು.25) ಎನ್ನುವ ಮಾತು ಅವರಿಗೆ ಅಧ್ಯಯನದ ಬಗೆಗಿದ್ದ ನಿಷ್ಠೆಯನ್ನು ತೋರುತ್ತದೆ. ಕಾಲೇಜು ಶಿಕ್ಷಣದಲ್ಲಿ ಕಡಿಮೆ ಅಂಕ ಗಳಿಸಿದ ಕಾರಣಕ್ಕಾಗಿ ಬೇಸರ ಮೂಡಿ, ಇನ್ನು ಮುಂದೆ ಕಾಲೇಜಿಗೆ ಹೋಗುವುದಾದರೆ ಅಲ್ಲಿರುವ ಅಧ್ಯಾಪಕರಿಗೆ ಕಲಿಸಲು ಹೋಗಬೇಕೇ ವಿನಃ ಕಲಿಯುವುದಕ್ಕಲ್ಲ ಎಂದು ತೀರ್ಮಾನ ಮಾಡಿದರು. ಹೀಗೆ ಗುರುವಿಗೇ ಗುರುವಾದರು.

ತಂದೆ ಪಡುಮುನ್ನೂರು ನಾರಾಯಣಾಚಾರ್ಯರು, ವಿದ್ಯಾಮಾನ್ಯ ತೀರ್ಥರು ಹಾಗೂ ಪೇಜಾವರ ಶ್ರೀಗಳವರಿಂದ ಒಂದಷ್ಟು ಪಾಠವಾಗಿರುವುದನ್ನು ಬಿಟ್ಟರೆ

ಬನ್ನಂಜೆಯವರದು ಸ್ವಾಧ್ಯಾಯವೇ ಸರಿ. ಸಂಸ್ಕೃತದ ಅಧ್ಯಯನ ಅಷ್ಟು ಸುಲಭದ ಸಂಗತಿಯೇನಲ್ಲ. ಸಂಸ್ಕೃತವನ್ನು ಅರ್ಥೈಸಿಕೊಳ್ಳಲು ಒಂದು ಜನ್ಮದ ಅಧ್ಯಯನ ಸಾಲದು. ಜನ್ಮಾಂತರದ ಸಂಸ್ಕಾರದಿಂದಲೇ ಸಂಸ್ಕೃತದ ಸಂಪೂರ್ಣ ತಿರುಳು ಅರಿವಾಗುತ್ತದೆಂಬುದು ಆಚಾರ್ಯರ ಅಭಿಮತ. ಇದಕ್ಕೆ ಬನ್ನಂಜೆಯವರೂ ಹೊರತಾಗಿಲ್ಲ. ಬನ್ನಂಜೆಯವರ ಅಪೂರ್ವ ಪ್ರತಿಭೆಗೆ ಜನ್ಮಾಂತರದ ಸಂಸ್ಕಾರ ಒಂದೆಡೆಯಾದರೆ ನೆನಪಿನ ಶಕ್ತಿ ಮತ್ತೊಂದೆಡೆ. ಸ್ಮರಣ ಶಕ್ತಿ ಚೆನ್ನಾಗಿರಲು ಮನನ, ಧ್ಯಾನ ಮತ್ತು ನಿಧಿಧ್ಯಾಸನ ಇವುಗಳೇ ಕಾರಣ ಎನ್ನುತ್ತಾರೆ." (ಆತ್ಮನಿವೇದನೆ ಪು.21)

ಇನ್ನು ಅವರ ಬರವಣಿಗೆಯನ್ನು ಅವಲೋಕಿಸುವುದಾದರೆ, ಕನ್ನಡದಲ್ಲಿ ಸುಮಾರು 94 ಕೃತಿಗಳು, 35 ಸಂಸ್ಕೃತ ಕೃತಿಗಳು, 15 ಲೇಖನಗಳು, 6 ವಿಶೇಷ ಉಪನ್ಯಾಸಗಳ ಬರಹ ರೂಪ, 5 ಅನುವಾದ ಕೃತಿಗಳನ್ನು ರಚಿಸಿದ್ದಾರೆ. ಅನೇಕ ಅರ್ಥದಲ್ಲಿ ಅವರು ಸವ್ಯಸಾಚಿ. ಕನ್ನಡ ಮತ್ತು ಸಂಸ್ಕೃತಗಳೆರಡರಲ್ಲೂ ನಿಸ್ಸೀಮರು. ಶಾಸ್ತ್ರ ಮತ್ತು ಕಾವ್ಯ, ಪರಂಪರೆ ಮತ್ತು ಆಧುನಿಕತೆ, ಓದು ಮತ್ತು ಬರವಣಿಗೆ ಹೀಗೆ.

ಸಂಸ್ಕೃತದಿಂದ ಕನ್ನಡಕ್ಕೆ ನಾಟಕಗಳ ಅನುವಾದ ಬನ್ನಂಜೆಯವರ ಸೃಜನಶೀಲತೆಗೆ ಹಿಡಿದ ಕನ್ನಡಿಯಂತಿದೆ. ಶೂದ್ರಕನ ಮೃಚ್ಛಕಟಿಕವು "ಆವೆಯ ಮಣ್ಣಿನ ಆಟದ ಬಂಡಿ"ಯಾಗಿ, ಕಾಳಿದಾಸನ ಅಭಿಜ್ಞಾನ ಶಾಕುಂತಲ "ನೆನಪಾದಳು ಶಕುಂತಲೆ"ಯಾಗಿ ಭವಭೂತಿಯ ಉತ್ತರರಾಮಚರಿತೆ "ಮತ್ತೆ ರಾಮನ ಕತೆ"ಯಾಗಿ ಕಾಳಿದಾಸನ ಋತುಸಂಹಾರಮ್ "ಋತುಗಳ ಹೆಣಿಗೆ"ಯಾಗಿ ಕೇವಲ ಅನುವಾದಗಳೆನಿಸದೆ ಸ್ವತಂತ್ರ ರಚನೆಗಳೇ ಆಗಿವೆ. ಅನುವಾದ ಕಷ್ಟಸಾಧ್ಯವೇ ಆದರೂ, ಆಚಾರ್ಯರು ಅಲ್ಲಿಯೂ ತಮ್ಮ ಪ್ರತಿಭೆ ಮತ್ತು ಸೃಜನಶೀಲತೆಯನ್ನೇ ಮೆರೆದಿದ್ದಾರೆ.

"ಹೇಳದೆ ಉಳಿದದ್ದು ಮತ್ತು ಇತರ ಕವನಗಳು" ಹಾಗೂ "ಇನ್ನಷ್ಟು ಹೇಳದೆ ಉಳಿದದ್ದು" ಎಂಬೆರಡು ಕವಿತೆಗಳ ಸಂಕಲನದ ಸೃಷ್ಟಿಕರ್ತರೂ ಆಗಿರುವರು. ಇಲ್ಲಿ ಸ್ವತಂತ್ರ ಕವಿತೆಗಳ ಜೊತೆ ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಗಳೂ ಇವೆ. ವಿಭಿನ್ನ ವಿಷಯಗಳನ್ನೊಳಗೊಂಡಿವೆ.

ಪೂರ್ವದಲ್ಲಿ ಉಲ್ಲೇಖಿಸಿದ ಕೃತಿಗಳಷ್ಟೇ ಅಲ್ಲದೆ "ಬಾಣಭಟ್ಟನ ಕಾದಂಬರಿ, ಮಹಾಶ್ವೇತೆ, ವಿಷ್ಣುಶರ್ಮನ ಪಂಚತಂತ್ರ, ತಂತ್ರಸಾರ ಸಂಗ್ರಹ, ವಿಷ್ಣುಪುರಾಣದ ಕನ್ನಡರೂಪ ಪರಾಶರ ಕಂಡ ಪರತತ್ವ, ಮಹಾಭಾರತ ತಾತ್ಪರ್ಯ ನಿರ್ಣಯ, ಸಂಗ್ರಹ ರಾಮಾಯಣ, ಭಗವದ್ಗೀತಾ, ಶ್ರೀ ಮಧ್ವವಿಜಯ, ಉಪನಿಷದ್ಗ್ರಂಥಗಳು, ಸಂಸ್ಕೃತ ಸೂಕ್ತಿ"ಗಳಂತಹ ಅವರ ಸ್ಫುಟವಾದ ಬರವಣಿಗೆಗಳನ್ನು ಮರೆಯುವಂತಿಲ್ಲ.

ಬನ್ನಂಜೆಯವರು ತಮ್ಮ ಸಾಹಿತ್ಯಕ ಸೇವೆಗೆ ಪದ್ಮಶ್ರೀ, ಗೌರವ ಡಾಕ್ಟರೇಟ್, ಕೇಂದ್ರ ಸಾಹಿತ್ಯ ಅಕಾಡೆಮಿ, ವಿದ್ಯಾವಾಚಸ್ಪತಿಗಳಂತಹ ಗೌರವಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ಆಡುಮುಟ್ಟದ ಸೊಪ್ಪಿಲ್ಲ ಎನ್ನುವ ಉಕ್ತಿ ಬನ್ನಂಜೆಯವರಿಗೆ ಹಲವು

ಅರ್ಥಗಳಲ್ಲಿ ಅನ್ವಯಿಸುವುದು. ಸ್ವಯಮಾಚಾರ್ಯ ಪುರುಷರಾಗಿ, ವಿದ್ಯಾವಿಲಾಸ ವೈಭವದಿ ಮೆರೆದು, ವಿದ್ಯಾವಾಚಸ್ಪತಿಯೆನಿಸಿ, ಕಾರಯಿತ್ರೀ ಪ್ರತಿಭೆಯನ್ನು ಹೊಂದಿ, ಪರಂಪರೆಯ ನವೀಕರಣದ ಹರಿಕಾರರೂ ಆಗಿ, ವೈದುಷ್ಯವೆಂಬ ಬೆರಗು ಮೂಡಿಸಿರುವ ಬನ್ನಂಜೆಯವರ ಜ್ಞಾನದಿಗಂತವು 'ನ ಭೂತೋ ನ ಭವಿಷ್ಯತಿ'.

**ಪರಾಮರ್ಶನ ಗ್ರಂಥಗಳು:**


1. ವೀಣಾ ಬನ್ನಂಜೆ (ಬರಹ) ಮತ್ತು ಬನ್ನಂಜೆ ಗೋವಿಂದಾಚಾರ್ಯ (ನಿರೂಪಣೆ), (2026), ಆತ್ಮನಿವೇದನೆ, ಹುಬ್ಬಳ್ಳಿ: ಸಾಹಿತ್ಯ ಪ್ರಕಾಶನ.
2. ಡಾಕ್ಟರ್ ಎಚ್. ವಿ. ನಾಗರಾಜರಾವ್, ಪ್ರೊಫೆಸರ್ ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ (ಸಂಪಾದಕರು), (2022), ಗೋವಿಂದಮಣಿದರ್ಪಣ, ಹೊಸಪೇಟೆ: ಯಾಜಿ ಪ್ರಕಾಶನ.
3. ಪ್ರೊಫೆಸರ್ ಮಲ್ಲೇಪುರಂ ಜಿ. ವೆಂಕಟೇಶ, ಕೃಷ್ಣರಾಜ ಕುತ್ಪಾಡಿ ಮತ್ತು ವೀಣಾ ಬನ್ನಂಜೆ (ಸಂಪಾದಕರು), (2022), ಬನ್ನಂಜೆಯವರೊಡನೆ ಉಪ–ವಾಸ, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.
4. ಬನ್ನಂಜೆ ಗೋವಿಂದಾಚಾರ್ಯ, (2019), ಋತುಗಳ ಹೆಣಿಗೆ, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.
5. ಬನ್ನಂಜೆ ಗೋವಿಂದಾಚಾರ್ಯ, (2019), ಮತ್ತೆ ರಾಮನ ಕತೆ, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.
6. ಬನ್ನಂಜೆ ಗೋವಿಂದಾಚಾರ್ಯ, (2019), ನೆನಪಾದಳು ಶಕುಂತಲೆ, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.
7. ಬನ್ನಂಜೆ ಗೋವಿಂದಾಚಾರ್ಯ, (2023), ಮಹಾಶ್ವೇತೆ, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.
8. ಬನ್ನಂಜೆ ಗೋವಿಂದಾಚಾರ್ಯ, (2019), ಹೇಳದೆ ಉಳಿದದ್ದು ಮತ್ತು ಇತರ ಕವನಗಳು, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.
9. ಬನ್ನಂಜೆ ಗೋವಿಂದಾಚಾರ್ಯ, (2017), ಇನ್ನಷ್ಟು ಹೇಳದೆ ಉಳಿದದ್ದು (ಕವನಗಳು–ಹವನಗಳು), ಹೊಸಪೇಟೆ: ಯಾಜಿ ಪ್ರಕಾಶನ.